(ಇಂದು ದಿನಾಂಕ: 15-06-2022 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು)

**ಮುಂದುವರೆದ ಪಾಟೀ ಸವಾಲು : ಪ್ರತಿವಾದಿ ನಂ.2(ಎ) ಮತ್ತು 3(ಎ) ಪರ ಶ್ರೀ ಕೆ.ಎ.ಜೆ. ವಕೀಲರಿಂದ :-**

ಕೇದಾರನಾಥ ಸ್ವಾಮಿ ಮತ್ತು ವಿನಾಯಕ ಇವರಲ್ಲಿ ದಾವ ಆಸ್ತಿ ವಿಷಯವಾಗಿ ಪಾಲು ವಿಭಾಗ ಆಗಿ ಪಡಲಯ್ಯ ಸ್ವಾಮಿ ಖರೀದಿಸಿರುವ ಆಸ್ತಿ ದಾವಾ ಷೆಡ್ಯೂಲ್ ಆಸ್ತಿ ನಂ.3 ಅವರ ಭಾಗಕ್ಕೆ ಹೋಯಿತೆ ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ಉತ್ತರಿಸಿರುತ್ತಾರೆ. 7 ಮತ್ತು 8 ನೇ ವಾದಿಯರ ಮದುವೆ ಸಲುವಾಗಿ ಪಡಲಯ್ಯ ಸ್ವಾಮಿಯವರು ಸಾಲ ಮಾಡಿರುವ ಕಾರಣ ಅದನ್ನು ತೀರಿಸಲು ದಾವ ಆಸ್ತಿಯ ಷೆಡ್ಯೂಲ್ ಐಟಂ ನಂ.3 ನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಹಾಗೂ 6 ನೇ ವಾದಿಯ ಮದುವೆ ಮಾಡಲು ಹಣ ಬೇಕಾದ ಕಾರಣ ನನ್ನ ತಂದೆ ದಾವಾ ಆಸ್ತಿಯ ಅನುಕ್ರಮ ಸಂಖ್ಯೆ:2 ವಿಷಯವಾಗಿ 2 ನೇ ಪ್ರತಿವಾದಿ ಗೆ ನೊಂದಾಯಿ ಖರೀದಿ ಕರಾರು ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಮ್ಮೆಲ್ಲರ ಹೆಣ್ಣುಮಕ್ಕಳ ಮದುವೆ ಮಾಡುವ ಸಲುವಾಗಿ ನಮ್ಮ ತಂದೆ ಸಾಲ ಮಾಡಿರುತ್ತಾರೆ. ದಾವಾ ಅನುಕ್ರಮ ಸಂಖ್ಯೆ: 2 ನ್ನು ಅವರು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಪುನಃ ನಮ್ಮ ಮದುವೆಯನ್ನು ನಮ್ಮ ತಾತ ಮಡಿರುತ್ತಾರೆ. ನಮ್ಮ ತಂದೆ ನಾಲ್ಕು ಜನ ಅಣ್ಣ-ತಮ್ಮಂದಿರು ಅವರಲ್ಲಿ ಒಬ್ಬರು ಮೃತಪಟ್ಟಿರುತ್ತಾರೆ. ಅವರು ನಾಲ್ಕು ಜನರಿಗೆ ಆಸ್ತಿ ಹಂಚಿಕೊಡಲಾಗಿದೆ ಎಂದರೆ ಸರಿ. ಹಾಗೆ ಭಾಗ ಮಾಡುವಾಗ ಅವರಿಗೆ ಯಾವುದೆ ಸಾಲ ಹಂಚಿಕೊಟ್ಟಿಲ್ಲ. ನಮ್ಮ ತಾತ ಮೌಖಿಕವಾಗಿ ಇಷ್ಟಿಷ್ಟು ಆಸ್ತಿ ತೆಗೆದುಕೊಳ್ಳಿ ಎಂದು ಹೇಳಿರುತ್ತಾರೆ ಆದರೆ ಯಾವುದೇ ದಾಖಲೆಯನ್ನು ಮಾಡಿಸಿಲ್ಲ. ನಮ್ಮ ತಾತ ಆಸ್ತಿ ಭಾಗ ಮಾಡುವಾ ಇಷ್ಟಿಷ್ಟು ಸಾಲ ಎಂದು

ಹಂಚಿಕೊಂಡಿದ್ದರು ಹಾಗೂ ನಮ್ಮ ತಂದೆ ನಮ್ಮ ಎಂಟು ಜನರನ್ನು ಜೋಪಾನ ಮಾಡಲು ಮತ್ತು ನಮ್ಮ ಮದುವೆ ಮಾಡಲು ತೆಗೆದುಕೊಂಡ ಸಾಲವನ್ನು ತೀರಿಸಲು ದಾವಾ ಆಸ್ತಿಗಳನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ತಂದೆ ಯಾವುದೆ ದುಶ್ಚಟಗಳು ಇರಲಿಲ್ಲ ಎಂದರೆ ಅವರು ಇಸ್ಪೀಟ್ ಆಡುತ್ತಿದ್ದರು. ಅವರುಇಸ್ಪೀಟ್ ಆಡುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ತಂದೆ ಇಸ್ಪೀಟ್ ಆಟ ಆಡುತ್ತಾರೆ ಎಂದು ನಾನು ಯಾವುದೇ ಫೀರ್ಯಾದಿ ಸಲ್ಲಿಸಿಲ್ಲ ಆದರೆ ನಮ್ಮ ತಾತ ಹಾಗೂ ಅವರ ಮಕ್ಕಳು ಕೂಡಿ ವಾಸವಿದ್ದಾಗ ಕೇಸು ಆಗಿದೆ ಎಂದು ಹೇಳುತ್ತಿದ್ದರು. ಖರೀದಿದಾರರಿಗೆ ಮೋಸ ಮಾಡಲು ನಾನು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ:**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ವಿಚಾರಿಸಿ ನಂತರ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ,

ಹಿರಿಯ ಸಿವಿಲ್ ನ್ಯಾಯಾಧೀಶರು,
ಸಿಂಧನೂರು